**ಓ.ಎಸ್.ನಂ :53/2016**
ಪಿ ಡಬ್ಲ್ಯು-1

ದಿ.15.02.2021 ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆ : ವಾದಿಪರ ಶ್ರೀ ಎನ್.ಟಿ.ಎಸ್. ವಕೀಲರಿಂದ</u>**

ನಾನು ನ್ಯಾಯಾಲಯಕ್ಕೆ ಸರ್ವೆ ನಂಬರ್.526 ಕ್ಕೆ ಸಂಬಂಧಿಸಿದ ಐದು ಗಣಕಯಂತ್ರ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-8 ರಿಂದ 12 ಎಂದು, ಬೊಮ್ಮಯ್ಯರವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-13 ಎಂದು, ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-14 ಎಂದು, ಗ್ರಾಮ ಲೆಕ್ಕಾಧಿಕಾರಿಯವರು ನೀಡಿದ ವಂಶವೃಕ್ಷವನ್ನು ಹಾಜರುಪಡಿಸಿದ್ದು ಅದನ್ನು ಗುರುತು ಮಾಡಲು ಪ್ರತಿವಾದಿ 1 ರಿಂದ 8 ರವರ ಪರ ವಕೀಲರು ತಕರಾರು ಮಾಡಿದ್ದು ಸದರಿ ತಕರಾರಿಗೆ ಒಳಪಟ್ಟಂತೆ ವಂಶವೃಕ್ಷವನ್ನು ನಿ.ಪಿ.-14(ಎ) ಎಂದು, ವಾದಿಯ ಗಂಡನಿಗೆ ಸಂಬಂಧಿಸಿದ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-15 ಎಂದು, ಚಳ್ಳಕೆರೆ ಪೊಲೀಸ್ ರವರಿಗೆ ನೀಡಿದ ತಿಪ್ಪೇಸ್ವಾಮಿ ತಂದೆ ಜಗಳೂರವರ ಹೇಳಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-16 ಎಂದು, ವಾದಿಯ ಗಂಡ ತೀರಿಕೊಂಡ ಬಗ್ಗೆ ಇನ್ ಕ್ವೆಷಟ್ ರಿಪೋರ್ಟ್ ಮತ್ತು ಸ್ಥಳ ಪಂಚನಾಮೆಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-17 ಮತ್ತು 18 ಎಂದು, ವಾದಿಗೆ ಸೇರಿದ ಪಡಿತರಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-19 ಎಂದು, ವಾದಿಯ ಗಂಡನ ಚುನಾವಣಾ ಆಯೋಗದವರು ನೀಡಿದ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-20 ಎಂದು, ಎಂ.ಆರ್.ಪಿ.31/2016-17 ರ ಎರಡು ಪುಟದ ಮುಟೇಷನ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-21 ಎಂದು, ಸ್ವತ್ತಿನ ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-22 ಎಂದು, ವಾದಿಯ ಗಂಡು ಮಕ್ಕಳು, ಅತ್ತೆ ಹಾಗೂ ವಾದಿಯ ಗಂಡನ ಚುನಾವಣಾ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ.-23, 23(ಎ), 23(ಬಿ) ಮತ್ತು 23(ಸಿ) ಎಂದು, ವಾದಿಗೆ ಸೇರಿದ ಆಧಾರ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-24 ಎಂದು ಮತ್ತು ವಾದಿಯ ಮಕ್ಕಳ ಆಧಾರ್ ಕಾರ್ಡ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.-24(ಎ) ಮತ್ತು 24(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ  ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಚಳ್ಳಕೆರೆ.